**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ :10/2018**

**ಪಿ ಡಬ್ಲ್ಯೂ - 7**

**ಸಿ ಡಬ್ಲ್ಯೂ - 9**

**ದಿಃ 05.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಮಂಗಳಗೌರಿ**

**ಗಂಡನ ಹೆಸರು ಃ ಆನಂದ್ ಕುಮಾರ್**

**ವಯಸ್ಸು ಃ 50 ವರ್ಷ**

**ಉದ್ಯೋಗ ಃ ದ್ವಿತೀಯ ದರ್ಜೆ ಸಹಾಯಕರು**

**ವಿಳಾಸ ಃ ಬೆಂಗಳೂರು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು 2016 ರಿಂದ ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕಳಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ.

ದಿಃ 08.06.2017 ರಂದು ಪೋಲೀಸರು ಒಟ್ಟು 6 ಸಿಲಿಂಡರ್ ಗಳನ್ನು ತಂದು ಹಾಜರುಪಡಿಸಿದ್ದರು. ಅವುಗಳಲ್ಲಿ ಭಾರತ್ ಕಂಪೆನಿಯ 3 ತುಂಬಿದ ಸಿಲಿಂಡರ್ ಗಳು ಹಾಗೂ ½ ಗ್ಯಾಸ್ ತುಂಬಿದ 1 ಸಿಲಿಂಡರ್ ಹಾಗೂ 1 ಏಷ್ಯಾ ಕಂಪೆನಿಯ ಖಾಲಿ ಸಿಲಿಂಡರ್ ಹಾಗೂ ಕಂಪೆನಿಯ ಹೆಸರಿಲ್ಲದ ಒಂದು ಕಮರ್ಷಿಯಲ್ ಖಾಲಿ ಸಿಲಿಂಡರ್ ಹಾಜರುಪಡಿಸಿದ್ದರು. ಸದರಿ ಸಿಲಿಂಡರ್ ಗಳು ಒಂದು ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿದ್ದವು ಎಂದು ಪೋಲೀಸರು ತಿಳಿಸಿದ್ದರು. ಸದರಿ ಸಿಲಿಂಡರ್ ಗಳನ್ನು ಸ್ವೀಕರಿಸಿದೆನು. (ಕಡತದಲ್ಲಿ ಸ್ವೀಕೃತಿಯ ಮೂಲ ಪ್ರತಿ ಇಲ್ಲದ ಕಾರಣ ನಕಲು ಪ್ರತಿಯನ್ನು ಗುರುತಿಸಿರುವುದಿಲ್ಲ.) ಈ ವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-7 ಮತ್ತು 8 ಫೋಟೊಗಳಲ್ಲಿನ ಸಿಲಿಂಡರ್ ಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಜಿ.ಜಿ. ಆರೋಪಿತರ ಪರ ವಕೀಲರಿಂದ**

ಸಿಲಿಂಡರ್ ಗಳನ್ನು ಪೋಲೀಸ್ ಠಾಣೆಯಿಂದ ತಂದು ಕೊಟ್ಟಿದ್ದರು ಸದರಿ ಪೋಲೀಸರ ಹೆಸರು ಗೊತ್ತಿಲ್ಲ. ಸಿಲಿಂಡರ್ ಗಳನ್ನು ಸ್ವೀಕರಿಸಿಕೊಂಡ ಸಮಯದಲ್ಲಿ ಯಾವುದೇ ಫೋಟೋ ತೆಗೆದಿಲ್ಲ. ನನ್ನ ಮುಂದೆ ಸಿಲಿಂಡರ್ ಗಳ ಮಹಜರ್ ಮಾಡಿಲ್ಲ. ನನ್ನ ಮುಂದೆ ಯಾವುದೇ ಸಿಲಿಂಡರ್ ಗಳನ್ನು

ಹಾಜರುಪಡಿಸಿಲ್ಲ ಹಾಗೂ ನಾನು ಯಾವುದೇ ಸಿಲಿಂಡರ್ ಗಳನ್ನು ಸ್ವೀಕರಿಸಿಲ್ಲ ಪೋಲೀಸರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಹೇಳಿಕೆಯನ್ನು ಎಲ್ಲಿ ಹಾಗೂ ಯಾವ ದಿನಾಂಕದಂದು ಕೊಟ್ಟಿರುತ್ತೇನೆ ಎಂದು ನೆನಪಿಲ್ಲ. ನಾನು ಯಾವುದೇ ಸಿಲಿಂಡರ್ ಸ್ವೀಕರಿಸದೇ ಇದ್ದರೂ ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**